able vote as required under Section 21(1)(14) of the Karnataka State Universities Act, 1976."

MR. SPEAKER.— The question is :

"That this House do proceed to elect five members to the Senate of Gulbarga University according to the principle of proportional representation by means of single transferable vote as required under Section 21(1)(14) of the Karnataka State Universities Act, 1976."

The motion was adopted

SRI A. LAKSHMI SAGAR (Minister for Low and Parliamentary Affairs).— Sir, I beg to move :

"That this House do proceed to elect five members to the Senate of Karnataka University according the to principle of proportional representation by means of single transferable vote as required under Section 21(1)(14) of the Karnataka State Universities Act, 1976."

MR. SPEAKER.— The question is :

"That this House do proceed to elect five members to the Senate of Karnataka University according to the principle of proportional representation by means of single transferable vote as requ ired under section 21(1) (14) of the Karnataka State Universities Act, 1976."

The Motion was adopted

CALLING ATTENTION TO A MATTER OF URGENT PUBLIC IMPORTANCEi

Sub.— Satyagraha undertaken by the employees of State Land Development Bank relating to Pay Scales etc.

SRI V. S. ACHARYA.— Sir, I wish to call the attention of the Minister for Co-operation to the Satyagraha undertaken by the employees of State Primary Land Development Bank demanding the pay scales and other service conditions on par with the employees of State Land Development Bank.

SRI R. L. JALAPPA (Minister for Co-operation).— Sir I wish to make the following statement .

ರಾಜ್ಯದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಸಿಬ್ಬಂದಿಯವರು ಸತ್ಯಾಗ್ರಹ ನಡೆಸಿರುವುದು ನಿಜ. ಇದರಿಂದ ರೈತರಿಗೆ ಅನಾನುಕೂಲವು ಸಹ ಆಗಿರುತ್ತದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ನೌಕರರಿಗೆ ದಿನಾಂಕ ೧-೧-೮೨ರಿಂದ ಈ ಕೆಳಗೆ ಕಂಡ ವೇತನ ಶ್ರೇಣಿಯನ್ನು ಕೊಡಲಾಗಿತ್ತು.

೧)	ಕಾರ್ಯದರ್ಶಿ	೫೦೦–೧,೧೨೦
೨)	ಅಕೌಂಟೆಂಟ್/ಮೇನೇಜರ್/ಸಹಾಯಕ ಕಾರ್ಯದರ್ಶಿ	೪೦೦–೯೦೦
೩)	ಪ್ರಥಮ ದರ್ಜೆ ಗುಮಾಸ್ತ/ಸೀನಿಯರ್ ಸೂಪರ್‌ವೈಜರ್	೪೦೦–೯೦೦
೪)	ಎರಡನೇ ದರ್ಜೆ ಗುಮಾಸ್ತ/ಜೂನಿಯರ್ ಸೂಪರ್‌ವೈಜರ್	೩೦೦–೭೦೦
೫)	ಡ್ರೈವರ್/ಅಟೆಂಡರ್	೨೮೦–೫೦೦
೬)	ಜವಾನ/ವಾಚ್‌ಮ್ಯಾನ್	೨೫೦–೪೦೦

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಪ್ರಾಧಿಕಾರವು ದಿನಾಂಕ ೯–೫–೮೩ರ ಸಭೆಯಲ್ಲಿ ಹೆಚ್ಚಿನ ವೇತನ ಶ್ರೇಣಿಯನ್ನು ಕೊಡಬೇಕೆಂದು ತೀರ್ಮಾನಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಮಾಡಿತು. ಎಲ್ಲಾ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಈ ಹೆಚ್ಚುವರಿ ವೇತನವನ್ನು ಕೊಡಲು ಶಕ್ತಿ ಇಲ್ಲದ್ದನ್ನು ಪರಿಗಣಿಸಿ ಸರ್ಕಾರವು ಆಜ್ಞೆ ಕ್ರಮಾಂಕ ಆರ್‌ಡಿಸಿ ೮೯ ಸಿಎಲ್‌ಎಂ ೮೩, ದಿನಾಂಕ ೬–೮–೮೩ರಂದು ಹೊಸ ವೇತನ ಶ್ರೇಣಿಯನ್ನು (೧–೪–೮೩ರಿಂದ ಹೆಚ್ಚುವರಿ ಸಂಬಳವನ್ನು ಕೊಡಲು) ಈ ಕೆಳಗೆ ಕಂಡಂತೆ ಆದೇಶ ಹೊರಡಿಸಿದೆ.

೧)	ಕಾರ್ಯದರ್ಶಿ	೭೫೦–೧,೫೦೦
೨)	ಅಕೌಂಟೆಂಟ್/ಮೇನೇಜರ್/ಸಹಾಯಕ ಕಾರ್ಯದರ್ಶಿ	೬೩೦–೧,೨೦೦
೩)	ಪ್ರಥಮ ದರ್ಜೆ ಗುಮಾಸ್ತ/ಸೀನಿಯರ್ ಸೂಪರ್‌ವೈಜರ್	೬೩೦–೧,೨೦೦
೪)	ಎರಡನೇ ದರ್ಜೆ ಗುಮಾಸ್ತ/ಜೂನಿಯರ್ ಸೂಪರ್‌ವೈಜರ್	೪೯೦–೯೫೦
೫)	ಡ್ರೈವರ್/ಅಟೆಂಡರ್	೪೧೦–೭೦೦
೬)	ಜವಾನ/ವಾಚ್‌ಮ್ಯಾನ್	೩೯೦–೫೫೦

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ಶಕ್ತ್ಯಾಶಕ್ತತೆಯನ್ನು ವರಿಶೀಲಿಸಲಾಗಿ, ೯೬ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಸುಮಾರು ರೂ, ೭.೧೧ ಕೋಟಿ ನಿವ್ವಳ ನಷ್ಟ ಅನುಭವಿಸಿರುವುದರಿಂದಲೂ ಹಾಗೂ ೩೯ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಬಹಳ ಸ್ವಲ್ಪ ಲಾಭ ಗಳಿಸಿರುವುದರಿಂದಲೂ ಈ ಹೆಚ್ಚುವರಿ ಸಂಬಳವನ್ನು ಭರಿಸಲು ಸಾಧ್ಯವಾಗುವುದಿಲ್ಲ.

ನೌಕರರ ಬೇಡಿಕೆಗಳಲ್ಲಿ ಕೇಳಿರುವ ವೇತನ ಭತ್ಯೆಯನು ಕೊಡುವುದಾದರೆ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಸುಮಾರು ರೂ. ೩೯ ಲಕ್ಷ ಹೆಚ್ಚುವರಿ ಸಂಪನ್ಮೂಲಗಳನ್ನು ಪಡೆಯ ಬೇಕಾಗಿರುತ್ತದೆ. ಈಗ ಸರ್ಕಾರವು ಮಂಜೂರು ಮಾಡಿರುವ ವೇತನ ಶ್ರೇಣಿಯನ್ನು ಕೊಟ್ಟರೂ ಸಹ ಸುಮಾರು ರೂ. ೧೮ ಲಕ್ಷಗಳನ್ನು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಹೊಂದಿಸಿಕೊಳ್ಳಬೇಕಾ ಗಿರುತ್ತದೆ. ಸರ್ಕಾರ ಮತ್ತು ರಾಜ್ಯ ಭೂ ಅಭಿವೃದ್ಧಿ ಬ್ಯಾಂಕು ಈಗ ಕೊಟ್ಟಿರುವ ವೇತನ ಶ್ರೇಣಿಯನ್ನು ಜಾರಿಗೆ ಕೊಡಲು ರೂ, ೧೦ ಲಕ್ಷಗಳನ್ನು ತುಂಬಬೇಕಾಗಿರುತ್ತದೆ.

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ನೌಕರರ ಸಂಘವು ಸರ್ಕಾರದ ಆಜ್ಞೆ ಬರುವುದಕ್ಕೆ ಮೊದಲೇ ಮುಷ್ಕರ ಸತ್ಯಾಗ್ರಹ ನಡೆಸಿರುವುದು ಸರ್ಕಾರದ ಮೇಲೆ ಒತ್ತಡ ತರುವ ಕ್ರಮವಾಗಿರುತ್ತದೆ.

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ನೌಕರರು ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿನ ನೌಕರರ ವೇತನ ಶ್ರೇಣಿಯನ್ನು ಕೇಳುವುದು ಸರಿಯಲ್ಲ. ಏಕೆಂದರೆ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕು ರಾಜ್ಯ ಮಟ್ಟದ ಸಂಸ್ಥೆಯಾಗಿರುವುದರಿಂದಲೂ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ತಾಲ್ಲೂಕು ಮಟ್ಟದ ಸಂಸ್ಥೆಯಾಗಿರುವುದರಿಂದಲೂ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ತಾಲ್ಲೂಕು ಮಟ್ಟದ ಸಂಸ್ಥೆಯಾಗಿರುವುದರಿಂದಲೂ ವೇತನ ಶ್ರೇಣಿಯಲ್ಲಿ ಸಮಾನತೆ ಯೋಚಿಸುವುದು ಸೂಕ್ತವಲ್ಲ.

ಈಗಾಗಲೇ ಈ ವಿಷಯವನ್ನು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಪ್ರಾಧಿಕಾರದ ನೌಕರರ ಸಂಘವು ಕಾರ್ಮಿಕ ಕಮಿಷನರ್‌ರವರ ಮುಂದೆ ಪ್ರಸ್ತಾವನೆ ಮಾಡಿರುವುದರಿಂದ, ಮುಷ್ಕರ ಹಾಗೂ ಸತ್ಯಾಗ್ರಹವನ್ನು ಹಿಂತೆಗೆದುಕೊಂಡ ನಂತರ ಬೇಡಿಕೆಗಳನ್ನು ಸರ್ಕಾರವು ಪರಿಶೀಲಿಸಬಹುದು.

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ನೌಕರರ ಪ್ರಾಧಿಕಾರದ ಪುನರ್‌ರಚನೆ ಬಗ್ಗೆ ಮತ್ತೊಮ್ಮೆ ಕೂಲಂಕುಶವಾಗಿ ಪರಿಶೀಲಿಸಲು ರಾಜ್ಯದ ಪ್ರಾಥಮಿಕ ಭೂ ಬ್ಯಾಂಕು ಅಭಿವೃದ್ಧಿ ಬ್ಯಾಂಕು ಅಧ್ಯಕ್ಷರುಗಳ ಒಂದು ಸಮ್ಮೇಳನವನ್ನು ಕರೆದು ಅವರ ಅಭಿಪ್ರಾಯವನ್ನು ಪಡೆದು ಮುಂದೆ ಈ ಪ್ರಾಧಿಕಾರದ ಮಾರ್ಪಾಡಿಗೆ ಮರು ಪರಿಶೀಲನೆ ಮಾಡಲಾಗುವುದು.

ಶ್ರೀ ವಿ. ಎಸ್. ಆಚಾರ್ಯ (ಉಡುಪಿ).— ಅಧ್ಯಕ್ಷರೇ, ಸಚಿವರು ಕೊಟ್ಟಿರತಕ್ಕ ಉತ್ತರ ತುಂಬಾ ಆಸಮಾಧಾನಕ್ಕೆ ಕಾರಣವಾಗಿದೆಯೆಂಬುದರಲ್ಲಿ ಪಾದ ಇಲ್ಲ. ಅವರು ಕೆಲವು ಲಕ್ಷಗಟ್ಟಲೆ ಅಂಕಿ ಸಂಖ್ಯೆ ಕೊಟ್ಟಿದ್ದಾರೆ. ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್‌ನವರು ಕೇಳುವುದನ್ನು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನವರು ಕೇಳಬಾರದು ಎನ್ನುವ ರೂಲಿಂಗನ್ನೇ ಮಾನ್ಯ ಮಂತ್ರಿಗಳು ಕೊಟ್ಟಹಾಗೆ ಕಾಣುತ್ತದೆ. ಇವತ್ತು ಅವರು ಸತ್ಯಾಗ್ರಹವನ್ನು ಏಕೆ ಮಾಡುತ್ತಿದ್ದಾರೆಂಬುದನ್ನು ನೋಡಬೇಕು. ಕೃಷಿ ವಿಸ್ತರಣೆ ಬಗ್ಗೆ ಕೇಂದ್ರದ್ದು ರಾಜ್ಯದ್ದು ಬೇರೆ ಬೇರೆ ಗ್ರಾಮ ಅಭಿವೃದ್ಧಿ ಕಾರ್ಯಕ್ರಮಗಳು, ಮುಖ್ಯವಾಗಿ ಅಗ್ರಿಕಲ್ಚರ್ ಎಕ್ಸ್‌ಟೆನ್‌ಷನ್ ಬಗ್ಗೆ, ಥೀಷ್ಣಾವಧಿ ಸಾಲದ ಬಗ್ಗೆ ವಿಶ್ವಬ್ಯಾಂಕಿನಿಂದ ಬರುವ ನೆರವಿನ ಬಗ್ಗೆ ನಾವು ನೆನ್ನೆ ಕೂಡಾ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ನಮ್ಮ ಜಿಲ್ಲೆಯ ೬,೦೦೦ ಹೆಕ್ಟೇರ್‌ನಷ್ಟು ಜಾಗದಲ್ಲಿ ಗೋಡಂಬಿ ಅಭಿವೃದ್ಧಿ ಬಗ್ಗೆ ವಿಶ್ವಬ್ಯಾಂಕಿನ ಸಹಾಯ ಬರುವಂತಹದ್ದು ಇದೆ. ಇದರಲ್ಲಿ ನಾಲ್ಕೂವರೆ ಸಾವಿರ ಹೆಕ್ಟೇರ್‌ನಷ್ಟರದ್ದು ಇವತ್ತು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಿಂದ ರೂಟ್ ಆಗಬೇಕು. ಇದೆಲ್ಲಾ ಸ್ಥಗಿತವಾಗಿದೆ. ಇಲ್ಲಿ ನಾವು ಸಾಂಸ್ಕೃತಿಕ ಒಳಹೊಂದರವನ್ನು ಉಂಟುಮಾಡಬೇಕಾಗುತ್ತದೆ. ೧೭೭ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗಳ ೧೭೦೦ ನೌಕರರು ಅನಿವಾರ್ಯವಾಗಿ ೨೮-೭-೮೩ ರಿಂದ ಮುಷ್ಕರದಲ್ಲಿದ್ದಾರೆ. ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್ ಹಾಗೂ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗಳೆರಡಕ್ಕೂ ಒಂದೇ ಸಮಾನ ಹುದ್ದೆ ಪ್ರಾಧಿಕಾರವನ್ನು ಅವರು ೧೯೭೮ರಲ್ಲಿ ರಚನೆ ಮಾಡಿದ್ದಾರೆ. ೧೯೭೮ರಲ್ಲಿ ರಚನೆ ಮಾಡಿದ ಪ್ರಾಧಿಕಾರ ಸರ್ಕಾರದ ೬೭ರ ಆಜ್ಞೆ. ೧-೧೦-೭೮ರ ಆಜ್ಞೆ. ೪-೧೦-೮೦ರ ಹಾಗೂ ೫-೧೦-೮೨ರ ಆಜ್ಞೆಗಳನ್ನು ಜಾರಿಗೊಳಿಸಲಿಲ್ಲ. ೨೯-೬-೮೬ ರಿಂದ ೧-೧೦-೮೮ರವರೆಗೆ ನೇಮಕ ಆದವರಿಗೆ ಏನು ವೇತನ ಕೊಡಬೇಕಾಗಿತ್ತೋ ಅದನ್ನು ಆ ಸಮಯದಲ್ಲಿ ಕೊಡದೆ ೧-೧೦-೮೨ ರಿಂದ ಕೊಟ್ಟಿದ್ದಾರೆ. ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರೇ, ಭೂ ಅಭಿವೃದ್ಧಿ ಬ್ಯಾಂಕಿನ ಉಪ ಮುಖ್ಯ ಲೆಕ್ಕಪರಿಶೋಧಕರನ್ನು ಕರೆಸಿ ಸಂಬಳ ಸೇವಾ ನಿಯಮದ ಬಗ್ಗೆ ಅಧ್ಯಯನ ಮಾಡಿ ಒಂದು ವರದಿಯನ್ನು ಸಲ್ಲಿಸಬೇಕೆಂದು ಹೇಳಿದರು. ಅವರು ವರದಿಯನ್ನು ಕೊಟ್ಟರು. ಅದನ್ನು ಇವರು ಜಾರಿ ಮಾಡಲಿಲ್ಲ. ೯-೫-೮೩ ರಂದು ಅದಕ್ಕಿಂತಾ ಕಡಿಮೆ ಇರುವ ಒಂದು ಸ್ಕೇಲನ್ನು ಪ್ರಾಧಿಕಾರದವರು ಸೂಚನೆ ಮಾಡಿದರು. ಮತ್ತೆ ೯-೫-೮೩ರಂದು ಸೂಚಿಸಿದ ಒಂದು ಸ್ಕೇಲನ್ನೂ ಕೊಡದೇ ೬-೮-೮೩ಕ್ಕೆ ಇನ್ನೂ ಕಡಿಮೆ ಸ್ಕೇಲನ್ನು ಕೊಟ್ಟಿದ್ದಾರೆ. ಇದು ಸಮಿತಿಯ ಪರವಾಗಿ ಪ್ರಾಧಿಕಾರದವರು ಕೊಟ್ಟಿದ್ದಲ್ಲ. ಇದನ್ನು ಸಹಾ ಪ್ರಾಧಿಕಾರದವರು ೧-೧೦-೮೨ರಿಂದ ಕೊಡಬೇಕೆಂದು ಕೇಳಿದರು. ಆದರೆ ಇದನ್ನು ೧-೪-೮೩ರಿಂದ ಜಾರಿಗೆ ಬರಬೇಕೆಂದು ಹೇಳಿದ್ದಾರೆ. ಸರ್ಕಾರ ರೈತರ ಬಗ್ಗೆ ಏನೇನೊ ಕಾರ್ಯಕ್ರಮ ಹಾಕಿಕೊಂಡಿದೆ. ೩೦-೬-೮೩ರೊಳಗೆ ಆಸಲು ಕಟ್ಟಿದವರಿಗೆ ಬಡ್ಡಿ ಮನ್ನಾ ಮಾಡುತ್ತೇವೆಂದಾಗ ಈ ಬ್ಯಾಂಕುಗಳವರು ಸುಮಾರು ೮೫ ಪರ್ಸೆಂಟ್ ಹಣವನ್ನು ರಿಕವರಿ ಮಾಡಿರುತ್ತಾರೆ.

ಅಧ್ಯಕ್ಷರು.—ತಾವು ಸಹಕಾರ ಇಲಾಖೆ ಬೇಡಿಕೆ ಮೇಲೆ ಮಾತನಾಡುತ್ತಿದ್ದೀರಾ ?

ಶ್ರೀ ವಿ. ಎಸ್. ಆಚಾರ್ಯ.—ಈ ಸಂಸ್ಥೆಗಳ ನೌಕರರ ಮುಷ್ಕರದಿಂದ ರೈತರಿಗೆ ತೊಂದರೆಯಾಗಿದೆ. ನಮ್ಮ ಭಾಗದ ಗೇರು ಕೃಷಿಯ ಬಗ್ಗೆ ಹೇಳುವುದಾದರೆ ಅಲ್ಲಿ ಸುಮಾರು ೪,೦೦೦ ಹೆಕ್ಟೇರ್ ಭೂಮಿಯಲ್ಲಿ ಬರೀ ಬೌಂಡರೀಸ್ ಹಾಕುವಂತ ಮಟ್ಟಕ್ಕೆ ಬಂದಿದ್ದಾರೆ. ಇಲ್ಲಿ ನಮಗೆ ಲಕ್ಷಗಟ್ಟಲೆ ಸಂಖ್ಯೆಗಳು ಬೇಕಾಗಿಲ್ಲ. ಕೃಷಿಯನ್ನು ಅಭಿವೃದ್ಧಿ ಮಾಡುವುದರಲ್ಲಿ ಸರ್ಕಾರ ಮಾಡಿರತಕ್ಕ ಇನೆಫಾಸ್ಟ್ರಕ್ಚರ್ ಏನು ? ನೌಕರರ ಮುಷ್ಕರ ನಿಲ್ಲಿಸುವ ಬಗ್ಗೆ ಸರ್ಕಾರ ಏನು ತೀರ್ಮಾನ ತೆಗೆದು ಕೊಂಡಿದೆ ? ೧,೭೦೦ ಜನ ನೌಕರರಿಗೆ ಏನು ಅನುಕೂಲ ಸಿಗಬೇಕಾಗಿದೆ ಅದನ್ನು ಕೊಡಲೇಬೇಕು. ಈ ನೌಕರರು ಬಹಳ ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸಚಿವರು ಕೊಟ್ಟಿರುವ ಹೇಳಿಕೆ ಅಸಂಗತವಾಗಿರುವುದರಿಂದ ಇದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏಪ್ರಿಲ್ ತಿಂಗಳಲ್ಲಿ ತಾವು ಏನು ಭರವಸೆ ಕೊಟ್ಟಿದ್ದೀರೋ, ಅದನ್ನು ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಕೆಲಸ ಮಾಡುವಂಥ ನೌಕರರು ಮುಷ್ಕರ ಮಾಡುತ್ತಿರುವುದು ನ್ಯಾಯವಾಗಿದೆ. ಒಂದೇ ಬ್ಯಾಂಕಿನಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಸಂಬಳಸಾರಿಗೆಯಲ್ಲಿ ತಾರತಮ್ಯ ತೋರಿಸುವುದರಿಂದ ಅನಿವಾರ್ಯವಾಗಿ ಮುಷ್ಕರವನ್ನು ಮಾಡುತ್ತಿದ್ದಾರೆ. ನಾನು ಕೂಡ ಕಳೆದ ೧೫-೨೦ ವರ್ಷಗಳಿಂದಲೂ ಜಾಲಪ್ಪನವರ ಜೊತೆಯಲ್ಲಿಯೇ ಸಹಕಾರಿ ಕ್ಷೇತ್ರದಲ್ಲಿ ಕೆಲಸಮಾಡಿಕೊಂಡು ಬಂದಿದ್ದೇನೆ. ಸರ್ಕಾರದವರು ಹೊರಡಿಸಿರುವ

ಆಜ್ಞೆಯನ್ನು ಜಾರಿಗೆ ತಂದಿರುವುದರಿಂದ ನೌಕರರಿಗೆ ತೊಂದರೆಯಾಗಿದೆ. ಕೂಡಲೇ ಸರ್ಕಾರದವರು ಮಂಜೂರಾತಿಯನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ನೌಕರರು ಮುಷ್ಕರ ಮಾಡಿರುವುದರಿಂದ ರೈತರಿಗೆ ತೊಂದರೆಯಾಗಿರುವುದು ನಿಜ. ರೈತರಿಗೆ ಅನುಕೂಲವಾಗಬೇಕಾದರೆ ನೌಕರರ ಬೇಡಿಕೆಗಳನ್ನು ಸರ್ಕಾರದವರು ಸಿ.ಸಿ.ಎ. ರೂಲ್ಸ್ ಪ್ರಕಾರ ೧–೧–೬೨ ರಿಂದಲೇ ಜಾರಿಗೆ ಬರುವಂತೆ ಏರ್ಪಾಡು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ವಿಷಯವ ಗಂಭೀರತೆ ಸರ್ಕಾರಕ್ಕೆ ಗೊತ್ತಿದೆ, ಮಾನ್ಯ ಸದಸ್ಯರು ಹೇಳಿದಹಾಗೆ ಲಕ್ಷಗಟ್ಟಲೆ ಅಂಕಿ ಸಂಖ್ಯೆಗಳು ಬೇಡ ಅಂದರೆ ಯಾವ ಅಂಕಿ ಸಂಖ್ಯೆಗಳನ್ನು ಕೊಡಬೇಕೋ ನನಗೆ ಗೊತ್ತಿಲ್ಲ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಸ್ವಾಯತ್ತ ಸಂಸ್ಥೆಗಳು ಒಂದುಮುಂಕ್ಕಾಲು ಪರ್ಸೆಂಟ್ ಹಣ ಕೊಡುತ್ತಿದ್ದೇವೆ. ಈಗ ಸುಮಾರು ೪೦ ಲಕ್ಷ ರೂಪಾಯಿಗಳ ಹಣವನ್ನು ಹೆಚ್ಚುವರಿಯಾಗಿ ಕೇಳುತ್ತಿದ್ದಾರೆ. ಸರಾಸರಿ ಒಂದು ಬ್ಯಾಂಕಿಗೆ ೨೫ ಸಾವಿರ ರೂಪಾಯಿ ಜಾಸ್ತಿಯಾಗುತ್ತದೆ. ಕೊಟ್ಟಂತಹ ಹಣವನ್ನು ವಾಪಸ್ಸು ಕೊಡುವಂಥ ಶಕ್ತಿ ಎಷ್ಟು ಬ್ಯಾಂಕುಗಳಿಗೆ ಇದೆ ? ೪೦ ಲಕ್ಷ ಏನು ೬೦ ಲಕ್ಷ ರೂಪಾಯಿ ಬೇಕಾದರೂ ಕೊಡುತ್ತೇವೆ ?[illegible]ಒಟ್ಟು ೧೭೭ ಬ್ಯಾಂಕುಗಳಲ್ಲಿ ಕೇವಲ ೩೭ ಬ್ಯಾಂಕುಗಳು ಲಾಭದಲ್ಲಿವೆ. ಮಿಕ್ಕ ಬ್ಯಾಂಕುಗಳಲ್ಲಿ ಸುಮಾರು ೭ ಕೋಟಿ ರೂಪಾಯಿ ಲುಕ್ಸಾನಾಗಿದೆ. ಈ ವರ್ಷ ಸಾಲವನ್ನು ಚೆನ್ನಾಗಿ ಕಲೆಕ್ಟ್ ಮಾಡಿದ್ದಾರೆ, ಲಾಭ ಬರುತ್ತದೆ. ಪ್ರತಿ ವರ್ಷವೂ ಯಾವ ಸರ್ಕಾರವೂ ಸಬ್ಸಿಡೈಸ್ ಮಾಡುವುದಕ್ಕಾಗುವುದಿಲ್ಲ, ಒಂದುಮುಂಕ್ಕಾಲು ಪರ್ಸೆಂಟ್ ಆದಾಯ ಬರುವಾಗ ಎಲ್ಲಿಂದ ಹಣ ಕೊಡಬೇಕು ? [illegible]ಒಟ್ಟು ಹತ್ತು ಲಕ್ಷ ರೂಪಾಯಿಗಳಲ್ಲಿ ೫ ಲಕ್ಷ ರೂಪಾಯಿಗಳನ್ನು ಸರ್ಕಾರ, ಇನ್ನು ೫ ಲಕ್ಷ ರೂಪಾಯಿಗಳನ್ನು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕು ಕೊಡಬೇಕು. ಕೊಡುವುದಕ್ಕೆ ಶಕ್ತಿ ಇದ್ದರೆ ನಮಗೆ ತೊಂದರೆ ಏನೂ ಇಲ್ಲ. ತಮಗೆ ಗೊತ್ತಿರುವಂತೆ ಬ್ಯಾಂಕುಗಳು ನಡೆಯುವುದಕ್ಕೆ ಆಧಾರಸ್ತಂಭ ಸದಸ್ಯರು. ಕಳೆದ ಹತ್ತು ವರ್ಷಗಳಿಂದಲೂ ಡಿವಿಡೆಂಟ್ ಕೊಡುವುದಕ್ಕಾಗಿಲ್ಲ.

ಶ್ರೀ ವಿ. ಎಸ್. ಆಚಾರ್ಯ.—ವ್ಯವಹಾರಿಕವಾಗಿ ಬ್ಯಾಂಕಿಂಗಳು ನಡೆಯಬೇಕಾಗಿದೆ. ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಕಾರ್ಯರೂಪಕ್ಕೆ ತರದೇ ಹೋದರೆ ಈ ದೇಶ ಬದುಕುವ ಹಾಗಿಲ್ಲ. ಆರ್ಥಿಕ ಸಂಪನ್ಮೂಲಗಳನ್ನು ಏನು ಕಂಡು ಹಿಡಿದಿದ್ದೀರಿ. ೧೭೭ ಸಂಸ್ಥೆಗಳು ಕಾಲಕಾಲಕ್ಕೆ ಬೇಕಾದ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ರೈತರುಗಳಿಗೆ ಕೊಡಬೇಕು. ರಾಜ್ಯದ ಬೊಕ್ಕಸದಿಂದ ಕೊಡುವುದಕ್ಕೆ ವ್ಯವಸ್ಥೆ ಮಾಡಿ ಇಲ್ಲದೇ ಹೋದರೆ ಈ ಸಂಸ್ಥೆಗಳನ್ನು ಮುಚ್ಚಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಕೊಡುವ ವ್ಯವಸ್ಥೆಯನ್ನಾದರೂ ಮಾಡಿ. ಸಿಬ್ಬಂದಿ ನೇಮಕ ಮಾಡಿದಮೇಲೆ ಅವರ ಬೇಡಿಕೆಗಳನ್ನು ಪೂರೈಸುತ್ತೇವೆಂದು ಭರವಸೆ ಕೊಟ್ಟಮೇಲೆ ಅದನ್ನು ಈಡೇರಿಸಬೇಕು.

೧–೦೦ ಪಿ.ಎಂ.

ಶ್ರೀ ಆರ್.ಎಲ್. ಜಾಲಪ್ಪ.— ಅಧ್ಯಕ್ಷರೆ, ೫೦೦–೦,೦೨೦ ರೂಪಾಯಿ ಸ್ಕೇಲ್ ಇದ್ದುದನ್ನು ೭೫೦–೦,೫೦೦ಕ್ಕೆ ಏರಿಸಿದ್ದೇವೆ. ೪೦೦–೯೦೦ ಇದ್ದುದನ್ನು ೬೩೦–೧೨೦೦ ರೂಪಾಯಿಗೆ ಏರಿಸಿ ಸ್ಕೇಲ್ ಚೆಂಜ್ ಮಾಡಿಕೊಟ್ಟಿದ್ದೇವೆ. ಇವೊತ್ತು ರಾಜ್ಯ ಭೂ ಅಭಿವೃದ್ಧಿ ಬಾಂಕಿನವರಿಗೆ ಮಾರ್ಜಿನ್ ಪ್ರಾಫಿಟ್ ಇರತಕ್ಕದ್ದು ಮುಂಕ್ಕಾಲು ಪರ್ಸೆಂಟ್. ರೈತರಿಗೆ ತೊಂದರೆಯಾಗುವುದನ್ನು ಒಪ್ಪಿಕೊಳ್ಳುತ್ತೇನೆ. ಈಗ ಒಂದು ತಾಲ್ಲೂಕಿನಲ್ಲಿ ೭ ಜನ ಏನು ಇರುತ್ತಾರೆ, ಅವರು ಇಡೀ ತಾಲ್ಲೂಕಿನ ಜನತೆಯ ಶೋಷಣೆ ಮಾಡುತ್ತಿದ್ದಾರೆ, ಅದನ್ನು ನಾನ್ ಆಫಿಷಿಯಲ್ ಯಾರೂ ಕೇಳುತ್ತಿಲ್ಲ. ಸಂಬಳ ಕೊಡುವ ಬಗ್ಗೆ ನನ್ನ ಅಭ್ಯಂತರ ಇಲ್ಲ. ಸರ್ಕಾರ ಈಗಾಗಲೇ ರೈತರಿಗೆ ೨೮ ಕೋಟಿ ರೂಪಾಯಿ ಸಬ್ಸಿಡಿ ಕೊಡಬೇಕಾಗಿದೆ. ೭ ಕೋಟಿ ರೂಪಾಯಿ ಕೊಟ್ಟಿದ್ದೇವೆ, ೬ ಕೋಟಿ ೨೭ ಲಕ್ಷ ರೂಪಾಯಿ ರಿಲೀಸ್ ಮಾಡಬೇಕಾಗಿದೆ. ಅಷ್ಟು ಹಣ ಭರಿಸಲಿಕ್ಕೆ ಆಗುತ್ತದೆಯೇ ? ಈಗ ಲೆಂಡಿಂಗ್ ಏನು ಮಾಡಿಕೊಂಡು ಬಂದಿದ್ದಾರೆ ಅದು ಜಾಸ್ತಿಯಾಗುವುದಿಲ್ಲ. ಬೋರ್‌ವೆಲ್ಸ್‌ಗೆ ರೆಸ್ಟ್ರಿಕ್ಷನ್ ಬಂದಿದೆ. ಜನರಲ್ ಲೋನ್ಸ್, ಮಿಟಿಯೊರೇಟಿಲೈಸೇಷನ್ ಆಗಿ ಸಬಾರ್ಡಿನವರು ರಿಲೀಸ್ ಮಾಡುತ್ತಿಲ್ಲ. ಸಾಕಷ್ಟು ಸೊಸೈಟಿಗಳು ಎಲಿಜಿಬಿಲಿಟಿ ಕಳೆದುಕೊಂಡಿವೆ. ಮಾನ್ಯ ಆಚಾರ್ಯ ಅವರಿಗೆ ಹೇಳಬೇಕೆಂದರೆ, ಸಾತ್ ಕೆನರಾ, ನಾರ್ತ್ ಕೆನರಾ, ಧಾರವಾಡ ಬಿಟ್ಟರೆ ಬೆಂಗಳೂರನ್ನು ಸೇರಿಸಿಕೊಂಡು ಹೇಳುವುದಾದರೆ ಎಷ್ಟೋ ಸೊಸೈಟಿಗಳು

ಉತ್ತಮವಾಗಿ ಕೆಲಸ ಮಾಡುತ್ತಿಲ್ಲ. ಏಳೂವರೆ ಕೋಟಿ ರೂಪಾಯಿ ಲುಕ್ಸಾನು ಆಗಿದೆ. ಇವರು ಮುಷ್ಕರ ಮಾಡಬೇಕಾದರೆ ಒಂದು ಡಿಸಿಪ್ಲಿನ್ ಬೇಡವೇ ? ನಾವು ಮುಷ್ಕರ ಮಾಡುತ್ತೇವೆಂದು ನಮಗೆ ಒಂದು ನೋಟೀಸ್ ಕೊಡುವುದು ಬೇಡವೇ ? ಕಿರಿ-ಓರೆಯಿಕ್ಕೆ ಏನು ಹಣ ವಸೂಲಾಗದೆ ಅದಕ್ಕೆ ಒಂದು ಡಿಸಿಬಿ ಸ್ಟೇಟ್‌ಮೆಂಟ್ ಬರುವುದು ಬೇಡವೇ ? ನಬಾರ್ಡ್ ಅವರು ಇವರಿಗೆ ಅಲಾಟ್‌ಮೆಂಟ್ ಹೇಗೆ ಕೊಡುವುದು. ಈ ವಿಂಡ್‌ಫಾಲ್ ಬಂದಿದೆ, ಹಣ ಇದೆ. ಈಗ ಕೃತ್ತಿಗೆ ಹಿಡಿದರೆ ಹಣ ಕೊಡುತ್ತಾರೆ ಎಂದು ಮಾಡಿದರೆ, ಇದನ್ನು ಯಾರೂ ಸರಿ ಎಂದು ಒಪ್ಪಿಕೊಳ್ಳುವುದಿಲ್ಲ. ಒನೇ ತಾರೀಖು ಸರ್ಕಾರದ ಆರ್ಡರ್ ಬಂದಿದೆ ಎಂದು ಹೇಳಿ, ಹಿಂದಿನ ತಾರೀಖಿನಿಂದಲೇ ಸ್ಟ್ರೈಕ್ ಮಾಡುತ್ತೇವೆಂದು ಹೇಳಿದರೆ ಇದು ನನಗೆ ಅರ್ಥವಾಗುವುದಿಲ್ಲ. ಇವೊತ್ತು ಸಂಬಳ ಜಾಸ್ತಿ ಮಾಡೋಣ, ಆದರೆ ಹಣ ಕೊಡಲಿಕ್ಕೆ ಎಷ್ಟು ಜನರಿಗೆ ಶಕ್ತಿ ಇದೆ. ಸಿ.ಸಿ ಬ್ಯಾಂಕುಗಳನ್ನು ಬಿಟ್ಟರೆ ಮಿಕ್ಕೆಲ್ಲಾ ಬ್ಯಾಂಕುಗಳಿಗೂ ಹಣ ಕೊಡಲಿಕ್ಕೆ ಶಕ್ತಿ ಇಲ್ಲ. ಈಗ ಬ್ಯಾಂಕುಗಳಲ್ಲಿ ಠೇರು ಹಣ ತೊಡಗಿದ್ದಾರಲ್ಲಾ ಅದರಲ್ಲಿ ಎಷ್ಟು ಜನರಿಗೆ ಡಿವಿಡೆಂಡ್ ಕೊಟ್ಟಿದ್ದಾರೆ ? ಸಿ.ಸಿ ಬ್ಯಾಂಕುಗಳು ಸರಿಯಾಗಿ ಇರಬಹುದು. ಇನ್ನುಳಿದ ೧೪ರಿ ಬ್ಯಾಂಕುಗಳು ಕಳೆದ ಹತ್ತು ವರ್ಷಗಳಿಂದಲೂ ಡಿವಿಡೆಂಡ್ ಕೊಟ್ಟಿಲ್ಲ. ಇದು ಯಾವ ಸಹಕಾರ ತತ್ವ ಸ್ವಾಮಿ ನನಗೆ ಗೊತ್ತಾಗುತ್ತಿಲ್ಲ. ಸಿಕ್ಕಿದ ಹಣ ಎಲ್ಲಾ ಬೇರೆ ಕಡೆ ಹೋದರೆ ರೈತರ ಗತಿ ಏನಾಗಬೇಕು. ಇವರು ದಿಢೀರ್ ಅಂತ ಮುಷ್ಕರ ಹೂಡುವುದು ಸರಿಯಲ್ಲ. ಇವರು ಇದೇ ರೀತಿ ಮುಂದುವರಿಸಿದರೆ, ನಾವು ಬೇರೆ ಎಂಪ್ಲಾಯಿಸ್ ಕಳುಹಿಸಿ ರೈತರಿಗೆ ತೊಂದರೆಯಾಗದಂತೆ ಮಾಡುತ್ತೇವೆ.

ಶ್ರೀ ಎಂ. ಮಹದೇವ್.—ನಾವು ನಿಮ್ಮ ಅಡ್ಮಿನಿಸ್ಟ್ರೇಷನ್‌ಗೆ ಇಂಟರ್‌ಫಿಯರ್ ಆಗುವುದಿಲ್ಲ. ತಾವು ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ, ಸೂಪರ್‌ಸೀಡ್ ಮಾಡಿ ವಹಿಸಿಕೊಳ್ಳಿ.

ಶ್ರೀ ಆರ್.ಎಲ್. ಜಾಲಪ್ಪ.—ಅಧ್ಯಕ್ಷರೆ, ಎಂಪ್ಲಾಯಿಸ್ ಸ್ಟ್ರೈಕ್ ಮಾಡಿದರೆ ಬ್ಯಾಂಕ್ ಸೂಪರ್ ಸೀಡ್ ಮಾಡಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದನ್ನು ಮಾಡಲಿಕ್ಕೆ ಆಗುತ್ತದೆಯೇ ?

ಶ್ರೀ ಎಂ. ಮಹದೇವ್.—ಯೂನಿವರ್ಸಲ್ ಪಾಲಿಸಿ ಬಗ್ಗೆ ಕೇಳಿದಾಗ, ಇದನ್ನೆಲ್ಲಾ ಕೋ-ಆಪರೇಟಿವ್ ಡಿಮ್ಯಾಂಡ್ ಮೇಲೆ ಹೇಳಿದಂತೆ ಹೇಳಿದರೆ ಸಾಧ್ಯವೇ ? ಈಗ ಏನು ಪ್ರಾಬ್ಲಮ್ ಇದೆ. ಅದನ್ನು ಹೋಗಲಾಡಿಸಲಿಕ್ಕೆ ಏನು ಮಾಡಬೇಕೋ ಅದರ ಬಗ್ಗೆ ತಾವು ಆಶ್ವಾಸನೆ ಕೊಡಿ. ಅವರು ವಾಪಸ್ಸು ತೆಗೆದುಕೊಂಡರೆ ಆ ಮೇಲೆ ಯೋಚನೆ ಮಾಡುತ್ತೇವೆಂದು ಹೇಳಿದ್ದೀರಿ.

ಶ್ರೀ ಆರ್.ಎಲ್. ಜಾಲಪ್ಪ.—ವಾಪಸ್ಸು ತೆಗೆದುಕೊಂಡರೆ ಕೊಡುತ್ತೇವೆಂದು ಹೇಳಿಲ್ಲ. ಯೋಚನೆ ಮಾಡುತ್ತೇವೆಂದು ಹೇಳಿದ್ದೇನೆ.

ಡಾ॥ ವಿ.ಎಸ್. ಆಚಾರ್ಯ.—ಸ್ವಾಮಿ, ತಾವು ಏಪ್ರಿಲ್ ತಿಂಗಳಿನಲ್ಲಿ ಭರವಸೆ ಕೊಟ್ಟಿದ್ದೀರಿ, ಅದನ್ನು ಜಾರಿ ಮಾಡಬೇಕು. ಎಷ್ಟೋ ನಷ್ಟದಲ್ಲಿವೆ ಎಂದು ಹೇಳಿದ್ದೀರಿ.

Mr. Speaker.—You can seek clarifications. Let us not discuss it. We have sufficiently discussed.

Dr. V.S. Acharya.—Sir, it is a very important matter.

ಶ್ರೀ ಆರ್.ಎಲ್. ಜಾಲಪ್ಪ.—ಈಗಾಗಲೇ ನಾನು ಭರವಸೆ ಕೊಟ್ಟಿದ್ದೇನೆ. ಅವರು ಸ್ಟ್ರೈಕ್ ವಿತ್‌ಡ್ರಾ ಮಾಡಿಕೊಳ್ಳದೇ ಇದ್ದರೆ we will see that the work is continued. We will make other arrangements. ನಾನು ವಿನಯಪೂರ್ವಕವಾಗಿ ಹೇಳುವುದು ಇಷ್ಟೆ. ನಾವು ನೀವು ಇಂತಹ ಒಂದು ಇನ್ಸಿಡಿಸಿಪ್ಲಿನ್‌ಗೆ ಎನ್‌ಕರೇಜ್‌ಮೆಂಟ್ ಮಾಡುವುದು ಬೇಡ. ರೈತರ ಏಕಾನಮಿ ಬಗ್ಗೆ ಜೋಕೆ ಮಾಡಲಿಕ್ಕೆ ಅವಕಾಶ ಕೊಡುವುದು ಬೇಡ.

ಡಾ॥ ವಿ ಎಸ್. ಆಚಾರ್ಯ.—ತಾವು ವಿಪ್ರಿಲ್ ತಿಂಗಳನಂತರ ರೀ ಕನ್‌ಸಿಡರ್ ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ತಾವು ಮಾಡಿ.

ಶ್ರೀ ಆರ್.ಎಲ್. ಜಾಲಪ್ಪ.—ಅದಕ್ಕೆ ನನ್ನ ಉತ್ತರ ನಾನು ಕೊಟ್ಟಿರತಕ್ಕ ಹೇಳಿಕೆಯ ಕಡೆ ಭಾಗದಲ್ಲಿ ಇದೆ, ರಾಜ್ಯದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರುಗಳ ಒಂದು ಸಮ್ಮೇಳನ ಕರೆಯಲಿಕ್ಕೆ ಕೇಳಿಕೊಂಡಿದ್ದೇವೆ. ಅಲ್ಲಿ ಅವರ ಕಷ್ಟ ಸುಖಗಳನ್ನು ಡಿಸ್‌ಕಸ್ ಮಾಡಲಿ. ಅವರ ಶಕ್ತಿ ಎಷ್ಟು ಇದೆ ಎನ್ನುವುದನ್ನು ಹೇಳಲಿ. ಅವರ ಮುಂದೆ ತೀರ್ಮಾನ ಮಾಡೋಣ.